# ಕರ್ನಾಟಕ ಸರ್ಕಾರದ ನಡವಳಿಗಳು

| | | |
|---|---|---|
| ವಿಷಯ | | 2012-13ನೇ ಸಾಲಿಗೆ **ಸೌರ ಬೆಳಕು ಯೋಜನೆಯಡಿ** ಅನುದಾನ ಬಿಡುಗಡೆ ಕುರಿತು |
| ಓದಲಾಗಿದೆ | 1. | ಸರ್ಕಾರ ಆದೇಶ ಸಂಖ್ಯೆ: 33 ಜೈಅಯೋ 2012 ದಿನಾಂಕ 14.09.2012 |
| | 2. | ಸರ್ಕಾರದ ಪತ್ರ ಸಂಖ್ಯೆ: 16 ಜೈಅಯೋ 2012 ದಿನಾಂಕ 07.07.2012 |

ಓದಲಾದ (1)ರ ಆದೇಶದಲ್ಲಿ 2012-13ನೇ ಸಾಲಿನಲ್ಲಿ ಸೌರ ಬೆಳಕು ಯೋಜನೆಯಡಿ ನಿಗದಿಪಡಿಸಲಾದ ರೂ.310.00 ಲಕ್ಷಗಳ ಪೈಕಿ ಶೇ.25ರಷ್ಟು ಅನುದಾನ ರೂ.75.00 ಲಕ್ಷಗಳನ್ನು ಯೋಜನೆಯ ಅನುಷ್ಠಾನ ಕುರಿತ ಪ್ರಾಥಮಿಕ ಚಟುವಟಿಕೆಗಳಿಗಾಗಿ ಪ್ರಾಯೋಗಿಕ ಜಿಲ್ಲೆಗಳಾದ ತುಮಕೂರು, ಚಿಕ್ಕಮಗಳೂರು, ಗದಗ, ಧಾರವಾಡ, ಗುಲಬರ್ಗಾ ಮತ್ತು ಬೀದರ್ ಜಿಲ್ಲಾ ಪಂಚಾಯತ್‌ಗಳಿಗೆ ಬಿಡುಗಡೆ ಮಾಡಲಾಗಿದೆ.

ಯೋಜನೆಯ ಅನುಷ್ಠಾನದ ಹಿತದೃಷ್ಟಿಯಿಂದ ಇನ್ನುಳಿದ ರೂ.235.00 ಲಕ್ಷಗಳ ಪೈಕಿ ರೂ.75.00 ಲಕ್ಷಗಳನ್ನು ಯೋಜನೆಯಡಿ ಆಯ್ಕೆ ಮಾಡಲಾದ ಪ್ರಾಯೋಗಿಕ ಜಿಲ್ಲೆಗಳಾದ ತುಮಕೂರು, ಚಿಕ್ಕಮಗಳೂರು, ಗದಗ, ಧಾರವಾಡ, ಗುಲಬರ್ಗಾ ಮತ್ತು ಬೀದರ್ ಜಿಲ್ಲಾ ಪಂಚಾಯತ್‌ಗಳಿಗೆ ಲೆಕ್ಕ ಶೀರ್ಷಿಕೆ 2810-01-198-1-01 (2810-00-101-0-91) (Lumpsum) ರಡಿ ಬಿಡುಗಡೆ ಮಾಡಲು ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 33 ಜೈಅಯೋ 2012, ಬೆಂಗಳೂರು, ದಿನಾಂಕ 23.11.2012.**

ಪ್ರಸ್ತಾವನೆಯಲ್ಲಿ ವಿವರಿಸಲಾದಂತೆ 2012-13ನೇ ಸಾಲಿನಲ್ಲಿ ಸೌರಬೆಳಕು ಯೋಜನೆಯ ಅನುಷ್ಠಾನಕ್ಕಾಗಿ ₹ 75.00 ಲಕ್ಷಗಳನ್ನು ( ರೂ. ಎಪ್ಪತ್ತೈದು ಲಕ್ಷಗಳು ಮಾತ್ರ) ಲೆಕ್ಕ ಶೀರ್ಷಿಕೆ 2810-01-198-1-01(2810-00-101-0-91) (Lumpsum) ರಡಿ ಈ ಕೆಳಕಂಡ ಜಿಲ್ಲಾ ಪಂಚಾಯತ್‌ಗಳಿಗೆ ಬಿಡುಗಡೆ ಮಾಡಿ ಆದೇಶಿಸಿದೆ.

| ಕ್ರ.ಸಂ | ಜಿಲ್ಲಾ ಪಂಚಾಯತ್ | ಬಿಡುಗಡೆ ಮಾಡಲಾದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|
| 1 | ತುಮಕೂರು | 12.50 |
| 2 | ಚಿಕ್ಕಮಗಳೂರು | 12.50 |
| 3 | ಗದಗ | 12.50 |
| 4 | ಧಾರವಾಡ | 12.50 |
| 5 | ಗುಲಬರ್ಗಾ | 12.50 |
| 6 | ಬೀದರ್ | 12.50 |
| | **ಒಟ್ಟು** | **75.00** |

ಬಿಡುಗಡೆ ಮಾಡಲಾದ ಅನುದಾನವು ಹಂಗಾಮಿಯಾಗಿದ್ದು, ಮಹಾಲೇಖಪಾಲರ ಲೆಕ್ಕತಪಾಸಣೆಗೊಳಪಟ್ಟಿರುತ್ತದೆ. ಸದರಿ ಅನುದಾನವನ್ನು ಉದ್ದೇಶಿತ ಕಾರ್ಯಕ್ರಮಕ್ಕಾಗಿ ಮಾತ್ರ ವಿನಿಯೋಗಿಸತಕ್ಕದ್ದು.

ಪ್ರಸಕ್ತ ಸಾಲಿನಲ್ಲಿ ಯೋಜನೆಯಡಿ ಸದರಿ ಅನುದಾನವನ್ನು ಒಳಗೊಂಡಂತೆ ಬಿಡುಗಡೆ ಮಾಡಿದ ಒಟ್ಟು ಅನುದಾನದಲ್ಲಿ ಅಂದರೆ ರೂ.150.00 ಲಕ್ಷಗಳಿಗೆ ಶೇ.75 ರಷ್ಟು ವೆಚ್ಚ ಮಾಡಿರುವ ಕುರಿತು ಸ್ಪಷ್ಟ ವರದಿ ಸಲ್ಲಿಸಿ, ಬಾಕಿ ಉಳಿದ ಅನುದಾನ ಬಿಡುಗಡೆಗೆ ಪ್ರಸ್ತಾವನೆ ಸಲ್ಲಿಸುವುದು.

ಸದರಿ ಅನುದಾನವನ್ನು ಇಲಾಖಾ ಅಂತರಿಕ ಆರ್ಥಿಕ ಸಲಹೆಗಾರರ ಸಹಮತಿ ಸಂಖ್ಯೆ: ಗ್ರಾಅಪ 129 ಪಿಬಿಎಸ್ 2012 ದಿನಾಂಕ 19.11.2012 ರಲ್ಲಿ ಪಡೆದು ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

23/11/12

(ಎಂ.ದೀಪಾ)
ನಿರ್ದೇಶಕರು(ಗ್ರಾಮೂಸಾ) ಹಾಗೂ
ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ತುಮಕೂರು, ಚಿಕ್ಕಮಗಳೂರು, ಗದಗ, ಧಾರವಾಡ, ಗುಲಬರ್ಗಾ ಮತ್ತು ಬೀದರ್
3. ಉಪಕಾರ್ಯದರ್ಶಿ(ಅಭಿವೃದ್ಧಿ)/ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ತುಮಕೂರು, ಚಿಕ್ಕಮಗಳೂರು, ಗದಗ, ಧಾರವಾಡ, ಗುಲಬರ್ಗಾ ಮತ್ತು ಬೀದರ್
4. ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು
5. ಜಿಲ್ಲಾ ಖಜಾನಾಧಿಕಾರಿಗಳು, ತುಮಕೂರು, ಚಿಕ್ಕಮಗಳೂರು, ಗದಗ, ಧಾರವಾಡ, ಗುಲಬರ್ಗಾ ಮತ್ತು ಬೀದರ್
6. ಇಲಾಖಾ ಅಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ
7. ಖಜಾನೆಗಳ ಉಪನಿರ್ದೇಶಕರು, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಟವರ್, ಬೆಂಗಳೂರು
8. ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್, ನಂ:49, ಸೆಕೆಂಡ್ ಬ್ಲಾಕ್, ಸೆಕೆಂಡ್ ಪ್ಲೋರ್, ಖನಿಜಭವನ, ಬೆಂಗಳೂರು.
9. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು(ಪಂ.ರಾಜ್) ರವರ ಆಪ್ತ ಕಾರ್ಯದರ್ಶಿಗಳು, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ
10. ರಕ್ಷಾ ಕಡತಕ್ಕೆ/ ಹೆಚ್ಚುವರಿ ಪ್ರತಿ